ಕವಿತೆ



ಡಾ.ಲಕ್ಷ್ಮಣ ವಿ.ಎ.

ಕಲೆ: ಬಸವರಾಜ ಕಲೆಗಾರ





# ಗ್ರೀನ್ ರೂಂ

ಗ್ರೀನ್ ರೂಮಿನಲ್ಲೊಂದು
ಹಗಲು ಹೊತ್ತಿನಲಿ ಪುಟ್ಟ ಲೋಕ
ಯಾರೊಬ್ಬರೂ ಎಂದಿಗೂ
ನೋಡಲಾಗದ ನಿಜ ನಾಟಕ

ಕಳಚಿಟ್ಟ ಕಣ್ಣೀರು ನೇತು ಹಾಕಿದ
ನಿಟ್ಟುಸಿರು
ರೆಡಿಮೇಡ್ ನಗೆ ಬೀಡಿ ಹೊಗೆ

ನಿನ್ನೆಯ ಕತ್ತಲೆಯಿಂದ ಇಂದಿನ
ಕತ್ತಲೆಯವರೆಗೆ ನಡೆದುಕೊಂಡೆ ಬಂದ
ಸಂಭಾಷಣೆ
ಸಭ್ಯಸ್ಥರು ಸೋಗು ಹಾಕಿದ ದಿರಿಸು
ಅಮಲುಗಣ್ಣಿನ ಬಲ್ಬು
ಕಳ್ಳಗಣ್ಣಿನಲಿ ನೋಡುತಿರುವ
ಯುವ ರಾಣಿಯ ಎದೆಯುಬ್ಬು

ಮುಖವಾಡದೊಳಗಿನ ಮತ್ಸರ
ಮಚ್ಚರದಾನಿಯೊಳಗೆ ಕಣ್ಣು ಮುಚ್ಚದ
ಕಾಮ
ಸುಳ್ಳು ಬಸಿರು ಬಾಡಿಗೆ ಕನಸು
ಮರೆತು ಹೋದ ಪಲ್ಲವಿ

ಶಿವನ ಬಿಲ್ಲು ಅವಳ
ಬಿಕ್ಕು ಜಡೆ ಸಿಕ್ಕಿನೊಳಗಿಂದ ಹೇಗೋ
ಪಾರಾಗಿ ಇಳಿದ ಗಂಗೆ
ತೊಡೆಯ ಮೇಲಿನ ಗೌರಿ ನಕ್ಕ ನಗೆ

ಮಾತು ಮಾತಿಗೆ ಎದೆ ಇರಿತ
ಹರಿತ ಬಾಣ
ಸುಳಿ ಗಾಳಿಗೆ ನಡಗುವ ಬೇಗಡೆಯ
ಶಿರಸ್ತ್ರಾಣ
ತಪ್ಪಿದ ರಾಗ ಹಾರ್ಮೋನಿಯಂನಲಿನ್ನೂ
ಜೀವವಿರುವ ಯುಗಳ ಗೀತೆ
ಬಿಚ್ಚಿಟ್ಟೆಸೆದ ತಾಳಿ ಕಳಚಿದ ಕಾಲಂದುಗೆ



ಆಟ
ಬೇಸರವಾದ ಒಂದು ದಿನ
ಅವರವರ ಅವಯವ ಅವರಿಗೆ
ಬಿಟ್ಟು ಇದ್ದಲ್ಲಿ ಇರುವ ಹಾಗೆ
ಗ್ರೀನ್ ರೂಮು ತೊರೆದು
ಮಾಸ್ತರನಿಗೂ ಹೇಳದೆ ಕೇಳದೆ
ನಡೆದು ಬಿಟ್ಟರೆ ಸಂತೆಯ ದಿನ

ಜನ ನಂಬುವುದು ಹೇಗೆ
ಇಲ್ಲಿ ನಿಜ ಯಾವುದು
ನಾಟಕ ಯಾವುದೋ ನಿಜ ಗುಣ?

